

ಫೋನು ಮಾಡಿದಾಗಲಷ್ಟೇ ಸುಭಾಷಿಣಿಗೆ ರಚನ್ ಕ್ಯಾಂಪಿಗೆ ಹೋಗಿಲ್ಲ ಎಂಬುದು ತಿಳಿದದ್ದು."

"ಸುಭಾಷಿಣಿ ಏನೂ ಹೇಳ್ಲಿಲ್ವಾ?"

"ಮಾಮೂಲು ವಿಷ್ಯಗಳು. ಆತನಿಗೆ ಸಾಲ ಇಲ್ಲ, ಶತ್ರುಗಳು ಇಲ್ಲ. ಅವ್ರಿಗೆ ಮಕ್ಳೂ ಇಲ್ಲ."

"ನಾವೀಗ್ಲೇ ಅವ್ನ ಮನೆಗೆ ಹೋಗೋಣ್ವೆ? ತಡ ಮಾಡಿದಷ್ಟು ಅಪಾಯ ಜಾಸ್ತಿ ಅಂತ ಅನ್ನಿಸ್ತಾ ಇದೆ."

ಒಗಟಿನಂತಿತ್ತು ಕರಮಚಂದನ ಮಾತು. ಡಿಸೋಜ ಹೂಂ ಎನ್ನುವಂತೆ ಗೋಣು ಆಡಿಸಿದ.

★★★

ರಸ್ತೆಯ ಕೊನೆಯಲ್ಲಿತ್ತು ರಚನ್‌ನ ಮನೆ. ತೀರಾ ಮಧ್ಯಮ ವರ್ಗದವರ ಮನೆ. ಚಿಕ್ಕ ಕೈತೋಟ. ಹಳೆಯ ಶೈಲಿಯ ಹೆಂಚಿನ ಮಾಡು. ನಾವು ಅಲ್ಲಿಗೆ ಹೋದಾಗ ಸುಭಾಷಿಣಿಯ ಜೊತೆ ಗಂಡಸೊಬ್ಬ ಇದ್ದ. ಆತನನ್ನು ತನ್ನ ತಮ್ಮನೆಂದು ಆಕೆ ಪರಿಚಯಿಸಿದಳು. ಆದರೆ ನಮ್ಮ ಬರುವಿಕೆ ಆತನಿಗೆ ಹಿತವಾದಂತೆ ಕಾಣಲಿಲ್ಲ. ಆತ ಲಗುಬಗೆಯಿಂದ ಅಲ್ಲಿಂದ ಕಾಲುಕಿತ್ತ. ಡಿಸೋಜ ನಮ್ಮನ್ನು ಆಕೆಗೆ ಪರಿಚಯಿಸಿದ.

"ಮೇಡಮ್, ರಚನ್ ಕಾಣೆಯಾಗುವ ಹಿಂದಿನ ಕೆಲ ದಿನಗಳಲ್ಲೇನಾದರೂ ವಿಶೇಷ ಘಟನೆ ನಡೆದಿತ್ತೆ? ಅವನ ನಡವಳಿಕೆಯಲ್ಲೇನಾದ್ರೂ ವ್ಯತ್ಯಾಸ?..."

"ಹಾಂ. ಎರಡ್ ದಿನದ ಹಿಂದೆ ಒಂದ್ ವಿಚಿತ್ರ ನಡ್ದಿತ್ತು. ರಚನ್ ಮನೇಲಿ ಇಲ್ದಿದ್ದಾಗ, ಅಪರಿಚಿತನೊಬ್ಬ ಬಂದು, ರಚನ್‌ಗೆ ಕೊಡುವಂತೆ ಹೇಳಿ, ಒಂದು ಲಕೋಟೆನ ಕೊಟ್ಟಿದ್ದ. ಗಮ್ ಮಾಡಿ ಮುಚ್ಚಿದ್ದ ಕವರ್. ನಾನದನ್ನು ಒಡ್ದು ನೋಡ್ದೆ. ಅದ್ರೊಳಗೆ ಇದ್ದಿದ್ದು ಒಂದ್ ಫೋಟೊ. ಒಬ್ಬ ಮುದುಕನ ಚಿತ್ರ. ಸಂಜೆ ಆ ಫೋಟೊ ನೋಡ್ದ ತಕ್ಷಣ ರಚನ್ ಆತಂಕಗೊಂಡಂತೆ ಕಂಡರು. ಕವರ್ ಒಡೆದಿದ್ದಕ್ಕೆ ನನ್ ಮೇಲೆ ರೇಗಾಡಿದ್ರು."

"ಆ ಫೋಟೊವನ್ನೊಮ್ಮೆ ನೋಡ್ಬಹುದೆ?"

"ಎಲ್ಲಿ ಇಟ್ಟಿದ್ದಾರೆ ಅಂತ ಗೊತ್ತಿಲ್ಲ. ಹುಡುಕ್ತೀನಿ, ತಾಳಿ" ಅಂತ ಹೇಳಿ ಪಕ್ಕದ ಕೊಠಡಿಗೆ ಹೋದ ಆಕೆ, ಐದಾರು ನಿಮಿಷಗಳಲ್ಲಿ ಕವರಿನೊಂದಿಗೆ ಹಿಂದಿರುಗಿದಳು.

ಕರಮಚಂದ ಆಸ್ಥೆಯಿಂದ ಅದನ್ನು ನಿರುಕಿಸಿದ. ನಾನೂ ಆತನ ಜೊತೆ ಕಣ್ಣು ಹರಿಸಿದೆ. ಅದೊಂದು,